ಮೂಲ ದಾವಾ ಸಂಖ್ಯೆ. 115/2016 ಪಿ ಡಬ್ಲ್ಯೂ 5

(ದಿನಾಂಕ 03-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀಮತಿ ಎ ಎಸ್ ಬಿ ವಕೀಲರಿಂದಃ-

ಈ ದಾವೆಯಲ್ಲಿ ನಾನು ಎಷ್ಟನೇ ವಾದಿ ಅಂತಾ ನನಗೆ ನೆನಪಿಲ್ಲ. 1 ನೇ ಪ್ರತಿವಾದಿಯು ಹಾಕಿರುವ ಪೈಪ್ ಲೈನ್ ಸರ್ವೆ ನಂ.104 ರಲ್ಲಿದೆ ಎಂದರೆ ಸರಿ. ಸದರಿ ಸರ್ವೆ ನಂ.104 ಟಿ ಬಿ ಬಿ ಗೆ ಸಂಬಂಧಿಸಿದ್ದು ಎಂದರೆ ಸರಿ. ಸರ್ವೆ ನಂ.104 ರಲ್ಲಿ 1 ನೇ ಪ್ರತಿವಾದಿಯು ಮೀನುಗಳನ್ನು ಸಂಗ್ರಹ ಮಾಡಲು ಗುಂಡಿಯನ್ನು ಮಾಡಿರುತ್ತಾರೆಂದರೆ ಸರಿ. ಅದೇ ರೀತಿ ಅಲ್ಲಿಯೇ ಅಕ್ಕಪಕ್ಕ ಅವರು ಸಾಕಷ್ಟು ಮೀನು ಸಾಕಾಣಿಕೆ ಗುಂಡಿಗಳನ್ನು ಮಾಡಿರುತ್ತಾರೆಂದರೆ ಸರಿ. ತುಂಗಭದ್ರಾ ನದಿಯಿಂದ ಜಮೀನುಗಳಿಗೆ ಪೈಪ್ ಲೈನ್ ಹಾಕಿಕೊಳ್ಳಬೇಕೆಂದರೆ 3 ನೇ ಪ್ರತಿವಾದಿಯವರಿಂದ ಪರವಾನಿಗೆ ಪಡೆಯಬೇಕೆಂದರೆ ಸರಿ. ಟಿ ಬಿ ಬಿ ಯನ್ನು ಹೊರತುಪಡಿಸಿ ಬೇರ್ಯಾವುದೇ ಇಲಾಖೆಯವರು ಪರವಾನಿಗೆ ಕೊಡಲು ಅರ್ಹರಲ್ಲವೆಂದರೆ ಸರಿ. 1 ನೇ ಪ್ರತಿವಾದಿ ಪೈಪ್ ಲೈನ್ ಹಾಕಿರುವ ಅಕ್ಕಪಕ್ಕ ನನ್ನ ಜಮೀನು ಇರುತ್ತದೆ. ಅದರ ಸರ್ವೆ ನಂ.114 ಇರುತ್ತದೆ. ನನ್ನ ಜಮೀನಿನ ಪಶ್ಚಿಮ ದಿಕ್ಕಿಗೆ 1 ನೇ ಪ್ರತಿವಾದಿ ಹಾಕಿರುವ ಜಮೀನು ಬರುತ್ತದೆ. ನಾವು ನದಿಯಿಂದ ಯಾವುದೇ ಪೈಪ್ ಲೈನ್ ನನ್ನ ಜಮೀನಿಗೆ ಹಾಕಿಕೊಂಡಿಲ್ಲ. ನನ್ನ ಜಮೀನಿನ ಸರ್ವೆ ನಂ.114 ರ ಪಹಣಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 1 ನೇ ವಾದಿ ಮತ್ತು ನಾನು ಒಂದೇ ಊರಿನವರು.

(ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ